ಕರ್ನಾಟಕ ಸರ್ಕಾರ

ಸಂಖ್ಯೆ: ಕಂಇ 95 ಟಿಎನ್‌ಆರ್ 2021

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:23-03-2021.

## ಆದೇಶ

1. ಭಾರತ ಸರ್ಕಾರದ ಕೇಂದ್ರ ಗೃಹ ಮಂತ್ರಾಲಯವು ಆದೇಶ ಸಂಖ್ಯೆ:40-3/2020-ಡಿಎಂ-I(ಎ), ದಿನಾಂಕ:26.02.2021ರಲ್ಲಿ ದೇಶಾದ್ಯಂತ ಕೋವಿಡ್-19 ಸೋಂಕು ನಿಗಾವಣೆ, ನಿಯಂತ್ರಣ ಮತ್ತು ಜಾಗೃತೆಗೆ ಸಂಬಂಧಿಸಿದಂತೆ ಮಾರ್ಗಸೂಚಿಗಳನ್ನು ಹೊರಡಿಸಿದೆ. ಅದರನ್ವಯ, ರಾಜ್ಯ ಸರ್ಕಾರವು ಆದೇಶ ಸಂಖ್ಯೆ: ಕಂಇ 158 ಟಿಎನ್‌ಆರ್ 2020, ದಿನಾಂಕ:01.03.2021ರಲ್ಲಿ ಕೋವಿಡ್-19 ವೈರಾಣು ಸೋಂಕು ನಿಗಾವಣೆ, ನಿಯಂತ್ರಣ ಮತ್ತು ಜಾಗೃತೆಗೆ ಸಂಬಂಧಿಸಿದಂತೆ ಮಾರ್ಗಸೂಚಿಗಳನ್ನು ಹೊರಡಿಸಿದ್ದು, ದಿನಾಂಕ:31.03.2021ರವರೆಗೆ ಜಾರಿಯಲ್ಲಿರುತ್ತದೆ.

2. ರಾಜ್ಯದಲ್ಲಿ ಪ್ರಸ್ತುತ ಕೋವಿಡ್-19 ಸೋಂಕು ಉಲ್ಬಣವಾಗಿದ್ದು, ಭಾರತದ ಚುನಾವಣಾ ಆಯೋಗವು ದಿನಾಂಕ:17.04.2021ಕ್ಕೆ ರಾಜ್ಯದಲ್ಲಿ ತೆರವಾಗಿರುವ ಬೆಳಗಾವಿ ಲೋಕಸಭಾ ಕ್ಷೇತ್ರದ ಒಂದು ಸ್ಥಾನಕ್ಕೆ ಹಾಗೂ ಬಸವಕಲ್ಯಾಣ ಮತ್ತು ಮಸ್ಕಿ ಈ ಎರಡು ವಿಧಾನ ಸಭಾ ಕ್ಷೇತ್ರಗಳಿಗೆ ಉಪ ಚುನಾವಣೆಯನ್ನು ನಡೆಸಲು ನಿರ್ಧರಿಸಿದೆ. ಉಪ ಚುನಾವಣೆ ನಿಮಿತ್ತ ದಿನಾಂಕ:23.03.2021ರಿಂದ ದಿನಾಂಕ:04.05.2021ರವರೆಗೆ ಚುನಾವಣಾ ಪ್ರಕ್ರಿಯೇ ಜಾರಿಯಲ್ಲಿರುತ್ತದೆ.

3. ಕೋವಿಡ್-19 ವೈರಾಣು ಸೋಂಕು ಹರಡುತ್ತಿರುವ ಸಂದರ್ಭದಲ್ಲಿ ಸುರಕ್ಷಿತವಾಗಿ ಚುನಾವಣಾ ಪ್ರಕ್ರಿಯೆಗಳನ್ನು ನಡೆಸುವ ಕುರಿತು ಭಾರತ ಚುನಾವಣಾ ಆಯೋಗವು ಆಗಸ್ಟ್-2020 ರಲ್ಲಿ ಹೊರಡಿಸಿರುವ ವಿಸ್ತೃತ ಮಾರ್ಗಸೂಚಿಯಂತೆ, ಚುನಾವಣಾ ಆಯೋಗ ಮತ್ತು ರಾಜ್ಯ ಸರ್ಕಾರ ಹಾಗೂ ಸಂಬಂಧಪಟ್ಟ ಚುನಾವಣಾ ಕ್ಷೇತ್ರಗಳಲ್ಲಿ ಕೋವಿಡ್-19 ನಿರ್ವಹಣೆಗಾಗಿ ಸಮನ್ವಯ ಕಾರ್ಯ ನಿರ್ವಹಿಸಲು ಈ ಕೆಳಕಂಡ ಅಧಿಕಾರಿಗಳನ್ನು ನೋಡಲ್ ಅಧಿಕಾರಿಗಳನ್ನಾಗಿ ನೇಮಿಸಲಾಗಿದೆ:

| ಕ್ರ. ಸಂ. | ಅಧಿಕಾರಿಗಳ ಹೆಸರು ಮತ್ತು ಹುದ್ದೆ | ಕಾರ್ಯ ನಿರ್ವಹಣಾ ಜವಾಬ್ದಾರಿ |
|---|---|---|
| 1 | **ಡಾ|| ವಿಶಾಲ್ ಆರ್.** ಭಾ.ಆ.ಸೇ., ಆಯುಕ್ತರು, ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆ, ಬೆಂಗಳೂರು. | ರಾಜ್ಯ ಮಟ್ಟದ ನೋಡಲ್ ಅಧಿಕಾರಿ |
| 2 | **ಡಾ|| ಮುನಿಯಾಲ್,** ಜಿಲ್ಲಾ ವೈದ್ಯಾಧಿಕಾರಿ, ಬೆಳಗಾವಿ ಜಿಲ್ಲೆ. | ಬೆಳಗಾವಿ ಲೋಕಸಭಾ ಕ್ಷೇತ್ರದ ಆರೋಗ್ಯ ನೋಡಲ್ ಅಧಿಕಾರಿ. |
| 3 | **ಡಾ|| ರಾಮಕೃಷ್ಣ,** ಜಿಲ್ಲಾ ವೈದ್ಯಾಧಿಕಾರಿ, ರಾಯಚೂರು ಜಿಲ್ಲೆ. | ರಾಯಚೂರು ಜಿಲ್ಲೆಯ ಆರೋಗ್ಯ ನೋಡಲ್ ಅಧಿಕಾರಿ. |
| 4 | **ಡಾ|| ವಿ.ಜಿ. ರೆಡ್ಡಿ,** ಜಿಲ್ಲಾ ವೈದ್ಯಾಧಿಕಾರಿ, ಬೀದರ್ ಜಿಲ್ಲೆ. | ಬೀದರ್ ಜಿಲ್ಲೆಯ ಆರೋಗ್ಯ ನೋಡಲ್ ಅಧಿಕಾರಿ. |
| 5 | **ಡಾ|| ಪ್ರವೀಣ್,** ತಾಲ್ಲೂಕು ವೈದ್ಯಾಧಿಕಾರಿ, ಬಸವಕಲ್ಯಾಣ, ಬೀದರ್ ಜಿಲ್ಲೆ. | ಬಸವಕಲ್ಯಾಣ ವಿಧಾನ ಸಭಾ ಕ್ಷೇತ್ರದ ಆರೋಗ್ಯ ನೋಡಲ್ ಅಧಿಕಾರಿ. |
| 6 | **ಡಾ|| ಅಮರೇಶ್ ಪಾಟೀಲ್,** ತಾಲ್ಲೂಕು ವೈದ್ಯಾಧಿಕಾರಿ, ಮಸ್ಕಿ ತಾಲ್ಲೂಕು, ರಾಯಚೂರು ಜಿಲ್ಲೆ. | ಮಸ್ಕಿ ವಿಧಾನ ಸಭಾ ಕ್ಷೇತ್ರದ ಆರೋಗ್ಯ ನೋಡಲ್ ಅಧಿಕಾರಿ. |

ಈ ಆದೇಶವನ್ನು ವಿಪತ್ತು ನಿರ್ವಹಣೆ ಕಾಯ್ದೆ-2005ರ ಸೆಕ್ಷನ್ 24 (ಇ), (ಎಫ್) ಮತ್ತು (ಎಲ್) ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಹೊರಡಿಸಿದೆ.

(ಅಂಜುಂ ಪರ್ವೇಜ್)
ಸರ್ಕಾರದ ಪ್ರಧಾನ ಕಾರ್ಯದರ್ಶಿ ಹಾಗೂ
ಸದಸ್ಯ ಕಾರ್ಯದರ್ಶಿ, ಕರ್ನಾಟಕ ರಾಜ್ಯ
ವಿಪತ್ತು ನಿರ್ವಹಣಾ ಪ್ರಾಧಿಕಾರದ
ಕಾರ್ಯಕಾರಿ ಸಮಿತಿ

ಇವರಿಗೆ:

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು.